P.W. 1

(ಇಂದು ದಿನಾಂಕ 20-11-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆಃ ಫಿರ್ಯಾದಿದಾರರ ಪರ ಶ್ರೀ ಜಿ.ವಿ.ಎನ್. ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದ್ದು, ಅದನ್ನು ಓದಿ ತಿಳಿದುಕೊಂಡು ನಂತರ ಅದಕ್ಕೆ ನಾನು ಸಹಿ ಹಾಕಿರುತ್ತೇನೆ.

ನಾನು ಖಾಸಗಿ ಫಿರ್ಯಾದಿಯೊಂದಿಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗೆ ಸೇರಿದಂತಹ ದಿನಾಂಕ 07-06-2022 ರ ಚೆಕ್ಕನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ಸದರಿ ಚೆಕ್ಕಿಗೆ ಆರೋಪಿ ಸಹಿ ಹಾಕಿದ್ದು ಅದನ್ನು ನೋಡಿ ಗುರುತಿಸಿದ್ದಾರೆ. ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಬ್ಯಾಂಕಿನವರು ಕೊಟ್ಟ ಹಿಂಬರವನ್ನು ನಿ.ಪಿ.2 ಎಂದು, ಆರೋಪಿಗೆ ಕೊಟ್ಟಂತಹ ಲೀಗಲ್ ನೋಟಿಸ್‌ನ ಕಚೇರಿ ಪ್ರತಿ ನಿ.ಪಿ.3 ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿ.ಪಿ.4 ಎಂದು, ಅಧಿಕಾರ ಪತ್ರವನ್ನು ನಿ.ಪಿ.5 ಎಂದು, ಠರಾವಿನ ಪ್ರತಿಯನ್ನು ನಿ.ಪಿ.6 ಎಂದು, ವ್ಯಾಪಾರ ಸಾಲದ ಅರ್ಜಿಯನ್ನು ನಿ.ಪಿ. 7 ಎಂದು, ಸಾಲ ಮಂಜೂರಾತಿ ಪತ್ರವನ್ನು ನಿ.ಪಿ. 8 ಎಂದು, ಸಾಲದ ಕರಾರನ್ನು ನಿ.ಪಿ. 9 ಎಂದು, ಡಿಮಾಂಡ ಪ್ರಾಮಿಸರಿ ನೋಟ್‌ನ್ನು ನಿ.ಪಿ.10 ಎಂದು, ಹೈಪೊಥಿಕೇಶನ್ ಅಗ್ರಿಮೆಂಟ್‌ನ್ನು ನಿ.ಪಿ.11 ಎಂದು, ಆರೋಪಿಯ ಸಾಲದ ಖಾತೆಗೆ ಸಂಬಂಧಪಟ್ಟ ಸ್ಟೇಟಮೆಂಟ್‌ನ್ನು ನಿ.ಪಿ.12 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಮುಖ್ಯ ನ್ಯಾಯಿಕ ದಂ. ಕಾರವಾರ